ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ,
ಉಡುಪಿ.

ಸಿ.ಸಿ.:509/2025
ಸಿ.ಡಬ್ಲ್ಯು 17 ಪಿ.ಡಬ್ಲ್ಯೂ :4

| | |
|---|---|
| ಸಾಕ್ಷಿದಾರರ ಹೆಸರು | ಶರಣಪ್ಪ ಮುಳ್ಳಾಳ್ |
| ತಂದೆಯ ಹೆಸರು | ಮಲ್ಲಪ್ಪ |
| ವಯಸ್ಸು | 32 ವರ್ಷ |
| ಉದ್ಯೋಗ | ಪೊಲೀಸ್ ಕಾನ್ ಸ್ಟೇಬಲ್ |
| ವಾಸಸ್ಥಳ | ಕಾಪು |

ದಿನಾಂಕಃ 30-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

2016 ರಿಂದ 2022 ರವರೆಗೆ ಕಾಪು ಪೋಲೀಸ್ ಠಾಣೆಯಲ್ಲಿ, 2022 ರಿಂದ ಕಾಪು ಪೊಲೀಸ್ ವೃತ್ತ ಕಚೇರಿಯಲ್ಲಿ ಪೋಲೀಸ್ ಪೇದೆಯಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ. ದಿಃ 20-12-2024 ರಂದು ನಾನು ಚಾಸಾ 18 ಮತ್ತು 19 ರವರೊಂದಿಗೆ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಬಡಾ ಗ್ರಾಮದ ಉಚ್ಚಿಲಕ್ಕೆ ಹೋಗಿದ್ದೆನು. ಪಿರ್ಯಾದಿಯವರು ಅಪಘಾತವಾಗಿದ್ದ ಸ್ಥಳವನ್ನು ತೋರಿಸಿದರು. ಪಿರ್ಯಾದಿಯವರು ತೋರಿಸಿದ ಸ್ಥಳ ದಲ್ಲಿ ಚಾಸಾ 19 ರವರು ಸ್ಥಳ ಪಂಚನಾಮೆಯನ್ನು ಚಾಸಾ 10 ಮತ್ತು 11 ರವರ ಸಮಕ್ಷಮದಲ್ಲಿ ತಯಾರಿಸಿದರು. ಪಂಚನಾಮೆಯನ್ನು ಚಾಸಾ 18 ರವರ ಮೊಬೈಲ್ ನಲ್ಲಿ ವೀಡಿಯೋಗ್ರಾಪ್ ಮಾಡಿದೆನು. ಸಾಕ್ಷಿಯವರು ಪಂಚನಾಮೆಯನ್ನು ಮತ್ತು ಅದರಲ್ಲಿರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಪಂಚನಾಮೆಯನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು, ಸಾಕ್ಷಿಯವರ ಸಹಿಯನ್ನು ನಿಪಿ. 2 ಸಿ ಎಂದು ಗುರುತಿಸಲಾಯಿತು.

ಅದೇ ದಿನ ಪಡುಬಿದ್ರಿಯ ನಡ್ಸಾಲು ಗ್ರಾಮದ ಪುಟಾರ್ಡೋ ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್ ಬಳಿ ನಿಲ್ಲಿಸಿದ್ದ ಕೆಂಪು ಬಣ್ಣದ

ಕೆಎಸ್ ಆರ್ ಟಿ ಸಿ ವಾಹನವನ್ನು ಪಿರ್ಯಾದಿಯವರು ನೋಡಿ ಗುರುತಿಸಿದ್ದು ಚಾಸಾ 10 ಮತ್ತು 11 ರವರ ಸಮಕ್ಷಮದಲ್ಲಿ ಚಾಸಾ 19 ರವರು ಪಂಚನಾಮೆಯನ್ನು ಮಾಡಿ ಜಪ್ತು ಮಾಡಿಕೊಂಡರು. ಪಂಚನಾಮೆಯ ಕಾರ್ಯವನ್ನು ಚಾಸಾ 18 ರವರ ಮೊಬೈಲ್ ನಲ್ಲಿ ಚಿತ್ರೀಕರಣ ಮಾಡಿದೆನು. ಪಂಚನಾಮೆಗೆ ಸಹಿಯನ್ನು ಮಾಡಿರುತ್ತೇನೆ. ಸಾಕ್ಷಿಯವರು ಪಂಚನಾಮೆಯನ್ನು ಮತ್ತು ಅದರಲ್ಲಿರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಸ್ವತ್ತು ಅಮಾನತು ಪಂಚನಾಮೆಯನ್ನು ಈಗಾಗಲೇ ನಿಪಿ.5 ಎಂದು ಗುರುತಿಸಲಾಗಿದ್ದು, ಸಾಕ್ಷಿಯವರ ಸಹಿಯನ್ನು ನಿಪಿ. 5(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಯವರು ಎರಡು ಭಾವಚಿತ್ರಗಳನ್ನು ನೋಡಿ ಇವುಗಳಲ್ಲಿ ಕಾಣುವ ಬಸ್ಸನ್ನೇ ಅಮಾನತು ಪಡಿಸಿಕೊಂಡದ್ದು ಎಂದು ಗುರುತಿಸಿದ್ದು ಸದರಿ ಭಾವಚಿತ್ರಗಳನ್ನು ಈಗಾಗಲೇ ನಿಪಿ. 6 ಮತ್ತು 7 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿಯವರ ಪರ ಶ್ರೀ ಪಿ. ಎನ್ ಎಸ. ವಕೀಲರಿಂದಃ**

ನಿಪಿ 2 ಮತ್ತು 3ರ ಮುದ್ರಣವನ್ನು ಠಾಣೆಯಲ್ಲಿ ತಗೆದಿರುವುದು ಎಂದರೆ ಹೌದು. ಮುದ್ರಿಸಿದ ನಂತರ ನೀವು ಮತ್ತು ಸಾಕ್ಷಿದಾರರು ಸಹಿ ಮಾಡಿರುತ್ತೀರಿ ಎಂದರೆ ಹೌದು. ಚಾಸಾ 10 ಮತ್ತು 11 ರವರು ಠಾಣೆಗೆ ಬಂದಿರುತ್ತಾರೆ ಎಂದರೆ ಹೌದು. ಠಾಣೆಯಲ್ಲಿ ಸಹಿ ಮಾಡುವಾಗ ಎಷ್ಟು ಸಮಯವಾಗಿತ್ತು ಎಂದರೆ ರಾತ್ರಿ 7.00 ಗಂಟೆಯ ಸಮಯವಾಗಿತ್ತು.

ಮರು ವಿಚಾರಣೆಃ ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ ಮತ್ತು ಎಸಿಜೆಎಂ ಉಡುಪಿ.